ಬಂದ ಸರಸ್ವತಿಯು ಚಹಾ ಮಾಡಲು ಒಲೆಯ ಮೇಲೆ ಪಾತ್ರೆ ಇಟ್ಟಳು. ತನ್ನ ಮನೆಯಲ್ಲಿನ ಕಷ್ಟ, ಗಂಡನ ಕಾಯಿಲೆ, ಹೀಗೆ ತನ್ನ ಖಾಸಗಿ ವಿಷಯಗಳನ್ನು ಸ್ವಾಭಿಮಾನಿಯಾದ ಸರಸ್ವತಿ ಯಾರೊಂದಿಗೂ ಅಷ್ಟಾಗಿ ಹಂಚಿಕೊಳ್ಳುತ್ತಿರಲಿಲ್ಲ. ಆದ್ದರಿಂದ ಅವಳಿಗೆ ತನ್ನ ಬಡತನ, ಕಷ್ಟಗಳನ್ನು ಈಗ ಒಡೆಯನ ಮುಂದೆ ಪ್ರದರ್ಶನಕ್ಕಿಟ್ಟಂತಾಗಿದ್ದು ಇಷ್ಟವಾಗಿರಲಿಲ್ಲ.

'ಯಾಕೆ ಒಂದು ವಾರದಿಂದ ಕೆಲಸಕ್ಕೆ ಬರಲಿಲ್ಲ?' ಎಂದ ರಾಜೀವನಿಗೆ, 'ಇವರಿಗೆ ಹುಷಾರಿರಲಿಲ್ಲ. ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದೆವು. ಅದಕ್ಕೆ ಕೆಲಸಕ್ಕೆ ಬರೋಕಾಗಲಿಲ್ಲ. ಆಸ್ಪತ್ರೆಯಲ್ಲಿದ್ದಾಗ ನನ್ನ ಮೊಬೈಲ್ ಕಳೆದುಹೋಯ್ತು. ಅದಕ್ಕೇ ನಿಮಗೆ ತಿಳಿಸೋದಕ್ಕೂ ಆಗಲಿಲ್ಲ' ಎಂದಳು. 'ಅದು ಸರಿ, ಆರು ತಿಂಗಳಿನಿಂದ ಆಧಾರ್ ಕಾರ್ಡ್ ಕೇಳಿದರೂ ಕೊಟ್ಟಿಲ್ಲ. ಈಗ ಅದು ತುರ್ತಾಗಿ ಬೇಕಾಗಿತ್ತು' ಎಂದು ತನಗೆ ಪೊಲೀಸ್ ಹೇಳಿದ್ದ ವಿಷಯ ಅವಳಿಗೆ ತಿಳಿಸಿದ. ಆಧಾರ್ ಕಾರ್ಡ್ ಕೇಳುತ್ತಲೇ ಸರಸ್ವತಿಯ ಮುಖ ಬಿಳಚಿಕೊಂಡಿತು.



'ಅದೂ ಸಾ...' ಎನ್ನುತ್ತಾ ತಡವರಿಸಿದ ಅವಳಿಗೆ, ಹಾಸಿಗೆಯ ಮೇಲೆ ಮಲಗಿದ್ದ ಗಂಡ, 'ಪರ್ವಾಗಿಲ್ಲ ಕೊಡಮ್ಮ, ಸಾರ್‌ನ ನಮ್ಮ ದೇವರು ಅಂತೀಯಾ, ದೇವರ ಹತ್ರ ಏನು ಸುಳ್ಳು, ಕೊಡು' ಎಂದನು. ಟ್ರಂಕೊಳಗಿನಿಂದ ಆಧಾರ್ ಕಾರ್ಡ್ ತೆಗೆದು ಸರಸ್ವತಿಯು ನಡುಗುವ ಕೈಯಿಂದ ರಾಜೀವನಿಗೆ ಕೊಟ್ಟಳು. ಆಧಾರ್ ಕಾರ್ಡನ್ನು ಮನೆಯಲ್ಲಿಟ್ಟುಕೊಂಡು, ಕೇಳಿದರೆ ತನ್ನ ಹತ್ತಿರ ಇಲ್ಲವೆಂದು ಸುಳ್ಳು ಹೇಳಿದ ಸರಸ್ವತಿಯ ಮೇಲೆ ರಾಜೀವನಿಗೆ ವಿಪರೀತ ಕೋಪ ಬಂತು. ಆಧಾರ್ ಕಾರ್ಡ್ ತೆಗೆದು ನೋಡಿದ ರಾಜೀವನಿಗೆ ತನ್ನ ಕಣ್ಣನ್ನೇ ತನಗೆ ನಂಬಲಾಗಲಿಲ್ಲ. ಅದರಲ್ಲಿ ಅವಳ ಫೋಟೋದ ಕೆಳಗೆ, ಹೆಸರಿನ ಕಾಲಂನಲ್ಲಿ 'ರೀಟಾ ಸೆಬಾಸ್ಟಿನ್' ಎಂದು ಬರೆದಿತ್ತು. ತಕ್ಷಣ ತಲೆ ಎತ್ತಿ ಎದುರಿನ ಗೋಡೆಯಲ್ಲಿದ್ದ ಮೇರಿಯು ಏಸುವನ್ನು ತೋಳಲ್ಲಿ ಹಿಡಿದಿರುವ ಚಿತ್ರಪಟ ನೋಡಿದ.

ಸರಸ್ವತಿ ಎಂಬ ಹೆಸರಿರಬೇಕಾಗಿದ್ದ ಜಾಗದಲ್ಲಿ ಬೇರೊಂದು ಹೆಸರನ್ನು ಕಂಡು ಗಲಿಬಿಲಿಗೊಳಗಾದ ರಾಜೀವನು 'ಇದರಲ್ಲಿ ನಾನು ಯಾವುದನ್ನು ನಂಬುವುದು? ಸರಸ್ವತಿ, ಹುಲಿಗೆಮ್ಮ, ರೀಟಾ ಸೆಬಾಸ್ಟಿನ್... ಇವರಲ್ಲಿ ನೀನು ಯಾರು? ನಿಜ ಹೇಳು. ಕಳೆದ ವಾರ ನಮ್ಮ ಏರಿಯಾದಲ್ಲಿ ನಡೆದ ಆ ಕೃತ್ಯ ನಡೆಸಿದ ಕೊಲೆಗಾರರೊಂದಿಗೆ ನಿನಗೇನಾದರೂ ಸಂಪರ್ಕವಿದೆಯಾ? ಮೂರ್ನಾಲ್ಕು ಹೆಸರು ಇಟ್ಟುಕೊಂಡಿರುವ ನೀನು ಅವರ ಜೊತೆ ಶಾಮೀಲಾಗಿದ್ದೀಯಾ ತಾನೇ?' ಎಂದು ರಾಜೀವ ಪ್ರಶ್ನೆಗಳ ಸುರಿಮಳೆಗೈಯ್ದ.

ಅವನ ಪ್ರಶ್ನೆಗಳಿಗೆ ಅಧೀರಳಾದ ಸರಸ್ವತಿಗೆ ದಿಕ್ಕೇ ತೋಚದಂತಾಗಿ ಕಣ್ಣೀರು ಸುರಿಸುತ್ತಾ 'ನಾನು ಅಂಥವಳಲ್ಲ ಸಾರ್, ಪ್ರಾಣ ಬೇಕಾದ್ರೆ ಬಿಡ್ತೀನಿ, ಆದರೆ ಬೇರೆಯವರ ತಲೆ ಒಡೆಯೋ ಕೆಲಸ ಮಾಡಲ್ಲ ಸಾರ್. ಮನೆಯ ಪರಿಸ್ಥಿತಿಯಿಂದ ಒಂದೇ ಒಂದು ಸುಳ್ಳು ಹೇಳಬೇಕಾಗಿ ಬಂತು. ನಿಮಗೆ ಇದೇ ಕಾರಣಕ್ಕೆ ಆಧಾರ್ ಕಾರ್ಡ್ ಕೊಟ್ಟಿರಲಿಲ್ಲ. ನಾನು ನನ್ನ ಜಾತಿ-ಧರ್ಮ ಹೇಳಿದ್ದರೆ ನಿಮ್ಮ ಮನೇಲಿ ಕೆಲಸ ಸಿಕ್ಕುತ್ತಿರಲಿಲ್ಲ. ಅದಕ್ಕೆ ಸುಳ್ಳು ಹೇಳಿದೆ. ಇದೊಂದು ಸುಳ್ಳು ಹೇಳಿದ್ದು ಬಿಟ್ರೆ, ನಾನು ನಿಮಗೆ ಯಾವ ರೀತಿಯ ಮೋಸವನ್ನೂ ಮಾಡಿಲ್ಲ ಸಾರ್' ಎಂದು ಹೇಳುತ್ತಾ ಸರಸ್ವತಿಯು ಅಲ್ಲೇ ಕುಸಿದಳು.

ಸರಸ್ವತಿ, ಹುಲಿಗೆಮ್ಮ, ಮೇರಿ ಸೆಬಾಸ್ಟಿನ್...

ತಾಯಿ ಹೃದಯಕ್ಕೆ ಎಷ್ಟೊಂದು ಹೆಸರುಗಳಿವೆ ಎನಿಸಿತು ರಾಜೀವನಿಗೆ.

●